ಜಲ ನಿರ್ಮಲ ಯೋಜನೆಯಡಿಯಲ್ಲಿನ ಕಾಮಗಾರಿ

2478(1919); ಶ್ರೀಗುರು ಪಾಟೀಲ ಶಿರವಾಳ (ಶಹಾಪೂರ)

ಅ) ಯಾದಗಿರಿ ಜಿಲ್ಲೆ, ಶಹಾಪುರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಜಲ ನಿರ್ಮಲ ಯೋಜನೆಯಡಿಯಲ್ಲಿ ಕೈಗೊಂಡಿರುವ ಹಾಗೂ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳಾವುವು (ವಿವರವಾದ ಮಾಹಿತಿ ನೀಡುವುದು)

ಆ) ವನದುರ್ಗಾ, ಶೆಟ್ಟಿಕೇರಾ ಹಾಗೂ ಇತರೆ ಗ್ರಾಮಗಳಲ್ಲಿ ಜಲ ನಿರ್ಮಲ ಯೋಜನೆಯಡಿಯಲ್ಲಿ ಕೈಗೊಂಡಿರುವ ಕಾಮಗಾರಿಗಳು ತೀರಾ ಕಳಪೆ ಮಟ್ಟದಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು;

ಈ) ಇದುವರೆಗೆ ಸದರಿ ಕಾಮಗಾರಿಗಳಿಗೆ ಬಿಡುಗಡೆಯಾದ ಮತ್ತು ಖರ್ಚಾದ ಮೊತ್ತವೆಷ್ಟು?

ಶ್ರೀ ಎನ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ವಿಶ್ವ ಬ್ಯಾಂಕ್ ನೆರವಿನ ಹೆಚ್ಚುವರಿ ಆರ್ಥಿಕ ಅನುದಾನದ ಜಲ ನಿರ್ಮಲ ಯೋಜನೆಯಡಿ ಶಹಾಪುರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಈ ಕೆಳಕಂಡ ಕುಡಿಯುವ ನೀರು ಸರಬರಾಜು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಕ್ರ.ಸಂ.	ಯೋಜನೆ	ಯೋಜನಾ ವೆಚ್ಚ (ರೂ.ಲಕ್ಷಗಳಲ್ಲಿ)
1	ಶಿರವಾಳ	226.41
2	ಅಣಬಿ	117.82
3	ಹೋತಪೇಟ ತಾಂಡಾ	35.45
4	ಇಟಗಿ	46.30
5	ವಂದಗನೂರ	48.24
6	ವನದುರ್ಗಾ ಬ.ಗ್ರಾ.ಕು.ನೀ.ಸ.ಯೋ.	589.49
ಒಟ್ಟು		**1064.64**

ಜಲನಿರ್ಮಲ ಯೋಜನೆಯು ಡಿಸೆಂಬರ್–2014 ಅಂತ್ಯಕ್ಕೆ ಮುಕ್ತಾಯಗೊಂಡಿದ್ದು, ಹೊಸದಾಗಿ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಆ) ಮತ್ತು ಇ) ವನದುರ್ಗಾ, ಶೆಟ್ಟಿಕೆರಾ ಹಾಗೂ ಇತರೆ ಗ್ರಾಮಗಳಿಗೆ ಅನುಷ್ಠಾನಗೊಳಿಸಲಾಗಿರುವ ಬಹುಗ್ರಾಮ ನೀರು ಸರಬರಾಜು ಯೋಜನೆಯ ಕಾಮಗಾರಿಗಳಿಗೆ ಗುಣಮಟ್ಟ ಪರೀಕ್ಷೆ ಮಾಡಿಸಲಾಗಿದ್ದು, ಎಲ್ಲಾ ಕಾಮಗಾರಿಗಳು ಪೂರ್ಣಗೊಂಡು ಟ್ರಯಲ್‌ರನ್ ಯಶಸ್ವಿಯಾಗಿ ಮಾಡಲಾಗಿರುತ್ತದೆ.

ಈ) ವನದುರ್ಗಾ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗೆ ರೂ. 589.49 ಲಕ್ಷ ಸಂಬಂಧಪಟ್ಟ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾಗಿದ್ದು, ರೂ. 589.49 ಲಕ್ಷ ಖರ್ಚು ಮಾಡಲಾಗಿದೆ.

ಎಸ್.ಆರ್.ಡಿ.ಡಬ್ಲ್ಯೂ.ಬಿ. ಯೋಜನೆಯಡಿ ಕಾಮಗಾರಿಗಳು

2479(3012); ಶ್ರೀ ಗುರುಪಾಟೀಲ್ ಶಿರವಾಳ (ಶಹಾಪೂರ)

ಅ) ಯಾದಗಿರಿ ಜಿಲ್ಲೆಯ ಶಹಾಪೂರ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಎನ್.ಆರ್.ಡಿ.ಡಬ್ಲ್ಯೂ.ಪಿ. ಯೋಜನೆಯಡಿಯಲ್ಲಿ ಮಂಜೂರಾದ ಹಾಗೂ ಖರ್ಚಾದ ಮೊತ್ತವೆಷ್ಟು (ಕಾಮಗಾರಿಗಳವಾರು ವಿವರ ನೀಡುವುದು);

ಆ) ಕಳೆದ ಮೂರು ವರ್ಷಗಳಿಂದ ಸದರಿ ಯೋಜನೆಯಡಿಯಲ್ಲಿ ಇ–ಟೆಂಡರ್ ಮೂಲಕ ಕೈಗೊಂಡ ಹಾಗೂ ಟೆಂಡರ್ ಕರೆಯದೇ ಕೈಗೊಂಡ ಕಾಮಗಾರಿಗಳಾವುವು (ವಿವರ ಒದಗಿಸುವುದು);

ಇ) ಸದರಿ ಯೋಜನೆಯಡಿ ಕೇಂದ್ರ ಸರ್ಕಾರದ ಅನುದಾನವು ಸಂಪೂರ್ಣವಾಗಿ ಬಳಕೆಯಾಗಿದೆಯೇ;